**ಚಂದ್ರಿಕಾ ಹೆಗಡೆ ಮತ್ತಿಹಳ್ಳಿ**

ಕಲೆ: ಬಸವರಾಜಾಚಾರ್ ಕೆ.ಆರ್.

# ಕಪ್ಪಡಿಗೆಮನೆ



ನಾನು ಹುಟ್ಟಿ ಬೆಳೆದದ್ದು ಮಲೆನಾಡಿನ ಎಲ್ಲಾ ಹಳ್ಳಿಮನೆಗಳ ಹಾಗೆಯೇ ಇದ್ದ ದೊಡ್ಡದಾದ ಹಳೆಯ ಕಾಲದ ಮನೆಯಲ್ಲಿ. ದಪ್ಪದಪ್ಪದ ಮಣ್ಣಿನ ಗೋಡೆಗಳು, ಕತ್ತಲು ತುಂಬಿದ ವಿಶಾಲವಾದ ಒಳಗಳು, ಸಗಣಿ ಸಾರಿಸಿದ ತಣ್ಣನೆಯ ನೆಲ, ಕರಿ ಹಿಡಿದು ಕಪ್ಪಗೆ ಮಿಂಚುವ ದೈತ್ಯಾಕಾರದ ಮರದ ತೊಲೆಗಳು, ಯಾವಾಗಲೋ ಸುಣ್ಣ ಬಳಿದುಕೊಂಡು ಬಿಳಿಯಾಗಿದ್ದ ಮೈಗೆ ಹೊಗೆ ಹಿಡಿದು ಕಂದುಬಣ್ಣಕ್ಕೆ ತಿರುಗಿ ಮುಟ್ಟಿದರೆ ಮಸಿ ಹಿಡಿಯುವ ಗೋಡೆಗಳು... ಮಲೆನಾಡಿನ ನಮ್ಮ ಹಳ್ಳಿಮನೆಗಳು ಆಗ ಇದ್ದುದೇ ಹೀಗೆ. ದೊಡ್ಡದಾದ ಅಂಗಳದಲ್ಲಿ ಎದುರು ಬದುರು ಸಾಲಾಗಿ ನಿಂತ ಕಲ್ಲುಕಂಬಗಳು, ಅದರ ಮೇಲೆ ಅಡಿಕೆ ಸುಗ್ಗಿಯ ಸಮಯದಲ್ಲಿ ಹಾಕುವ ಅಡಿಕೆ ದಬ್ಬೆಯ ಅಟ್ಟ, ಕೆಳಗೆ ತಂಪಿನ ನೆರಳು ಹಾದು ನಾಲ್ಕು ಮೆಟ್ಟಿಲು ಹತ್ತಿದರೆ ಬಾಗಿಲ ಅಕ್ಕ ಪಕ್ಕ ಉದ್ದನೆಯ ಕಟ್ಟೆ. ಹಳೆಯ ಕಾಲದ ದಪ್ಪ ಮರದ ಬಾಗಿಲು ದಾಟಿದರೆ ಮರದ ಕಂಬಗಳು ತುಂಬಿದ ನಸುಬೆಳಕಿನ ಜಗುಲಿ. ಜಗುಲಿಯ ಮಾಸಿದ ಗೋಡೆಯ ತುಂಬೆಲ್ಲಾ ನೇತಾಡುವ ದೇವರ ಪಟಗಳು... ಫೋಟೋಗಳು. ಅವುಗಳ ಹಿಂದೆ ಬಿಳಿಹುಲ್ಲು ತಂದು ತುಂಬಿ ನೇತಾಡಿಸಿ ಗೂಡು ಮಾಡಿಕೊಂಡ ಗುಬ್ಬಚ್ಚಿಗಳ ಚಿಲಿಪಿಲಿ. ನೆತ್ತಿಗೆ ಹೊಡೆಯದಂತೆ ತಲೆ ತಗ್ಗಿಸಿ ತಗ್ಗಾದ ಪ್ರಧಾನ ಬಾಗಿಲು ದಾಟಿದರೆ ಸಿಗುವುದೇ ನಡುಮನೆ. ನಡುಮನೆಯ